**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,</u>**
**<u>ಪಾಂಡವಪುರ</u>**

**ದಿನಾಂಕಃ 02.04.2026**

**<u>ಸಿ.ಸಿ.ನಂ. 830/2025</u>**

ಫಿರ್ಯಾದಿಃ- ಪಾಂಡವಪುರ ಠಾಣಾ ಪೊಲೀಸರು

ಃ ವಿರುದ್ದ ಃ

ಆರೋಪಿ ಃ ದಿವಾಕರ್.ಟಿ ಬಿನ್ ಲೇಃ ತಿಮ್ಮೇಗೌಡ.ಟಿ,
ಸುಮಾರು 45 ವರ್ಷ,
ವಾಸಃ ದೊಡ್ಡಹಾರೋಹಳ್ಳಿ ಗ್ರಾಮ, ಹರಕೆರೆ ಹೋಬಳಿ,
ಎಸ್.ಆರ್.ಪಟ್ನ ತಾಲ್ಲೂಕು, ಮಂಡ್ಯ.

# <u>ದೋಷಾರೋಪಣಾ</u>

**ಶ್ರೀಮತಿ. ಪಾರ್ವತಮ್ಮ.ಬಿ, ಬಿ.ಎ, ಎಲ್.ಎಲ್.ಎಂ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾಂಡವಪುರ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ಹೊರಿಸುತ್ತಿದ್ದೇನೆ.**

ಆರೋಪಿಗಳಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ, ದಿನಾಂಕ: 06.06.2025 ರಂದು ಮದ್ಯಾಹ್ನ 3.30 ಗಂಟೆ ಸಮಯದಲ್ಲಿ ಪಾಂಡವಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಪಾಂಡವಪುರ ತಾಲೂಕು, ಚಿಕ್ಕಾಡೆ ಗ್ರಾಮದ ಹತ್ತಿರ ಇರುವ ಶ್ರೀ ದೇವಿರಮ್ಮ ದೇವಸ್ಥಾನದ ರಸ್ತೆಯಲ್ಲಿರುವ ಚಿಕ್ಕಾಡೆ ಗ್ರಾಮದ ಚಿಕ್ಕಪುಟ್ಟೇಗೌಡ ರವರ ಜಮೀನಿನ ಮುಂಭಾಗ ಹಾದು ಹೋಗಿರುವ ಸಾರ್ವಜನಿಕ ಗಾಡಿ ಜಾಡಿನ ಕಲು ಮಣ್ಣಿನ ರಸ್ತೆಯಲ್ಲಿ ಚಾಸಾ-1 ಲೋಕೇಶ್ ರವರು ಕೆಲಸದ ನಿಮಿತ್ತ ಮಂಡ್ಯ ನಗರದಲ್ಲಿರುವ ಏರ್ಟೆಲ್ ಆಫೀಸಿಗೆ ಹೋಗಿ ಅಲ್ಲಿ ಕೆಲಸ ಮುಗಿಸಿಕೊಂಡು ತನ್ನ ಸ್ನೇಹಿತನ ಮನೆಯಲ್ಲಿ ನಾನ್ವೆಜ್ ಊಟದ ಜೊತೆ ಮಧ್ಯ ಸೇವನೆ ಮಾಡಿಕೊಂಡು ತಮ್ಮ ಬಾಬ್ತು ನಂ.ಕೆ.ಎ-11/ಇ.ವಿ-3146 ರ ಟಿ.ಪಿ.ಎಸ್ ಕಂಪನಿಯ ಜುಪಿಟರ್ ಸ್ಕೂಟರ್ನಲ್ಲಿ ಮಂಡ್ಯದಿಂದ ಮಂಡ್ಯ-ಪಾಂಡವಪುರ ಮಾರ್ಗವಾಗಿ ಹೊರಟು ಮಧ್ಯಾಹ್ನ 03.00 ಗಂಟೆ ಸಮಯದಲ್ಲಿ ಚಾಸಾ-1 ರವರು ಮಧ್ಯದ ಅಮಲಿನಲ್ಲಿ ಸದರಿ ಸ್ಕೂಟರನ್ನು ಚಾಲನೆ ಮಾಡಲು ಸಾಧವಾಗದೇ ದೊಡ್ಡಬ್ಯಾಡರಹಳ್ಳಿಯ ರೈಲ್ವೆ ಸ್ಟೇಷನ್ ಕ್ರಾಸ್ ನಲ್ಲಿ ನಿಯಂತ್ರಣ ತಪ್ಪಿ ಸ್ಕೂಟರ್ ಸಮೇತ ಕೆಳಕ್ಕೆ ಬಿದ್ದ ಪರಿಣಾಮ ಅಲ್ಲಿಯೇ ಇದ್ದ ಅಂಗಡಿಯವರು ಹಾಗೂ ರಸ್ತೆಯಲ್ಲಿ ಬಂದ ಸಾರ್ವಜನಿಕರು ಅವರನ್ನು ಮೇಲಕ್ಕೆತ್ತಿ ಉಪಚರಿಸಿ ರಸ್ತೆಯ ಪಕ್ಕ ಕೂರಿಸಿ ಸಮಾಧಾನ ಪಡಿಸುತ್ತಿದಾಗ, ಆ ಸ್ಥಳಕ್ಕೆ ಆರೋಪಿಯು ಚಾಸಾ-8 ಮಂಜು.ಟಿ.ಆರ್ ರವರ ಬಾಬ್ತು ನಂ.ಕೆ.ಎ-13/ಸಿ-2699 ರ ಅಶೋಕ್ ಲೈ ಲಾಂಡ್ ಗೂಡ್ಸ್ ಕ್ಯಾರಿಯರ್ ವಾಹನದಲ್ಲಿ ಬಂದು ಚಾಸಾ-1 ರವರ

ಕತ್ತಿನಲಿದ್ದ 27 ಗ್ರಾಂ ಚಿನ್ನದ ಚೈನನ್ನು ನೋಡಿ ಚಾಸಾ-1 ರವರು ಪರಿಚಯವಿರುವಂತೆ ನಟಿಸಿ ಅವರಿಗೆ ವಂಚನೆ ಮಾಡುವ ಉದ್ದೇಶದಿಂದ ಮದ್ಯದ ಅಮಲಿನಲ್ಲಿದ್ದ ಚಾಸಾ-1 ರವರಿಗೆ ಯಾಕಣ್ಣ ಏನಾಯಿತು ನಾನು ಪಾಂಡವಪುರಕ್ಕೆ ಹೋಗುತ್ತಿದ್ದೀನಿ ನಾನೇ ನಿನ್ನನ್ನು ಬಿಟ್ಟುಕೊಡುತ್ತೇನೆಂದು ಅಲ್ಲಿದ್ದ ಸಾರ್ವಜನಿಕರಿಗೆ ಇವರು ನಮ್ಮ ಕಡೆಯವರು ನಾನೇ ಕರೆದುಕೊಂಡು ಹೋಗುತ್ತೇನೆಂದು ಹೇಳಿ ನಂಬಿಸಿರುತ್ತೀರಿ, ಆ ಕಾರಣ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.318(2) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

<u>ಎರಡನೆಯದಾಗಿಃ</u>- ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಅಪರಾಧವನ್ನು ಎಸಗುವ ಉದ್ದೇಶದಿಂದ, ತಾನು ತಂದಿದ್ದ ಸದರಿ ಗೂಡ್ಸ್ ವಾಹನವನ್ನು ಅಲ್ಲೆ ರಸ್ತೆಯ ಪಕ್ಕ ನಿಲ್ಲಿಸಿ ಅವರ ಬಾಬ್ತು ಮೇಲ್ಕಂಡ ಸ್ಕೂಟರಿನಲ್ಲಿ ಚಾಸಾ-1 ರವರನ್ನು ಸದರಿ ಸ್ಕೂಟರಿನ ಹಿಂಬದಿ ಸೀಟಿನಲ್ಲಿ ಕೂರಿಸಿಕೊಂಡು ಆರೋಪಿಯೇ ಸದರಿ ಸ್ಕೂಟರ್ ಅನ್ನು ಚಾಲನೆ ಮಾಡಿಕೊಂಡು ಪಾಂಡವಪುರದ ಮಾರ್ಗವಾಗಿ ಹೊರಟು ಮಾರ್ಗ ಮಧ್ಯೆ ಇರುವ ಚಿಕ್ಕಾಡೆ ದೇವಿರಮ್ಮ ದೇವಸ್ಥಾನಕ್ಕೆ ಹೋಗುವ ರಸ್ತೆಯ ಕಡೆಗೆ ಸ್ಕೂಟರನ್ನು ತಿರುಗಿಸಿ ದೇವಿರಮ್ಮ ದೇವರ ಕಮಾನಿನಿಂದ ಸ್ವಲ್ಪ ಮುಂದೆ ಜಮೀನಿನ ನಿರ್ಜನ ಪ್ರದೇಶದಲ್ಲಿ ಸ್ಕೂಟರ್ ಅನ್ನು ನಿಲಿಸಿ ಕೆಳಕ್ಕೆ ಇಳಿದು ತನ್ನ ಜೇಬಿನಲ್ಲಿದ್ದ ಫೋನ್ ತೆಗೆದುಕೊಂಡು ತನ್ನ ಹೆಂಡತಿಗೆ ಫೋನ್ ಮಾಡುವ ರೀತಿ ನಟಿಸಿ ಗದ್ದೆಗೆ ನೀರು ಬಿಟ್ಟಿಲ್ಲಾ, ಏಕೆ ಬಿಟ್ಟಿಲ್ಲಾ, ನಾನೇ ನೀರು ಕಟ್ಟುತೇನೆಂದು ಹೇಳಿ ಫೋನ್ ಕರೆಯನ್ನು ಕಟ್ ಮಾಡಿದಂತೆ ನಟಿಸಿ ಚಾಸಾ-1 ರವರನ್ನು ಸ್ಕೂಟರ್ ನಿಂದ ಕೆಳಕ್ಕೆ ಇಳಿಸಿ ಅವರ ಕತ್ತಿನಲ್ಲಿದ್ದ 27 ಗ್ರಾಂ ತೂಕದ ಚಿನ್ನದ ಚೈನನ್ನು ಹಾಗೂ ಸ್ಕೂಟರ್ ಅನ್ನು ಚಾಸಾ-1 ರವರಿಂದ ವಂಚನೆ ಮಾಡುವ ಉದ್ದೇಶದಿಂದ ತೆಗೆದುಕೊಂಡು ಮತ್ತೆ ಬರುತ್ತೇನೆಂದು ಹೇಳಿ ಅವರನ್ನು ಅಲ್ಲಿಯೇ ಬಿಟ್ಟು ಅಲ್ಲಿಂದ ಹೊರಟು ಮಂಡ್ಯ ಮಾರ್ಗವಾಗಿ ಹೊರಟು ಲೋಕಪಾವನಿ ನದಿ ಏರಿಯ ಮೇಲೆ ಸದರಿ ಸ್ಕೂಟರನ್ನು ತೆಗೆದುಕೊಂಡು ಹೋಗಿ ನಿಲ್ಲಿಸಿ ಅಲ್ಲಿಂದ ಮುಖ್ಯ ರಸ್ತೆಗೆ ಬಂದು ಅಲ್ಲೆ ರಸ್ತೆಯಲ್ಲಿ ಬಂದ ಯಾವುದೋ ಒಂದು ವಾಹನದಲ್ಲಿ ದೊಡ್ಡಬ್ಯಾಡರಹಳ್ಳಿ, ರೈಲ್ವೆ ಕ್ರಾಸ್ ರಸ್ತೆಗೆ ಬಂದು ತಾನು ನಿಲ್ಲಿಸಿದ್ದ ಗೂಡ್ಸ್ ವಾಹನವನ್ನು ತೆಗೆದುಕೊಂಡು ಹೊರಟು ಹೋಗಿರುತ್ತೀರಿ, ಆ ಕಾರಣ ಆರೋಪಿಗಳಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.318(4) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

**ಸದರಿ ಮೇಲ್ಕಂಡ ಆರೋಪಗಳಿಗೆ ಆರೋಪಿಯಾದ ನೀವು ಗುರಿಯಾಗತಕ್ಕದ್ದು ಎಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ.**

**(ಪಾರ್ವತಮ್ಮ.ಬಿ.)**
**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ**
**ನ್ಯಾಯಾಲಯ, ಪಾಂಡವಪುರ.**

**ಆರೋಪಿಯ ಸಹಿಃ**